
2022 ಹೇಗಿರಬೇಕು?

## ಕೂಡಿಸುವುದರ ಖುಷಿ ಮನಗಾಣಲಿ



ಪ್ರತಿ ವರ್ಷದ ಅಂತ್ಯದಲ್ಲಿಯೂ ನಾವು ಹೊಸವರ್ಷವನ್ನು ನೋಡುವುದು ಒಂದಿಷ್ಟು ಆಶಾವಾದದೊಂದಿಗೇ. ಕಳೆದ ವರ್ಷ ಕಂಡ ನೋವುಗಳೆಲ್ಲ ಕರಗಿ, ಹೊಸ ವರ್ಷ ನೆಮ್ಮದಿಯನ್ನು ತರಲಿ ಎಂದೇ ಮನಸ್ಸು ಬಯಸುತ್ತಿರುತ್ತದೆ. ಈ ವರ್ಷದಲ್ಲಿಯೂ ಅಂಥದ್ದೇ ಆಶಯದೊಂದಿಗೆ ನಾನು 2022ನ್ನು ಎದುರು ನೋಡುತ್ತಿದ್ದೇನೆ.

ಅರಚಾಟದಲ್ಲಿ ಕಳೆದುಹೋಗಿರುವ ನಾವೆಲ್ಲರೂ ತುಸು ಮೌನವನ್ನು ಅಪ್ಪಿಕೊಳ್ಳಬೇಕಿದೆ. 'ಕೇಳಿಸಿಕೊಳ್ಳುವುದು' ಎಷ್ಟು ಮುಖ್ಯ ಎನ್ನುವುದನ್ನು ಅರಿಯಬೇಕಿದೆ. ಕೇಳಿಸಿಕೊಳ್ಳಲು ಸಾಧ್ಯವಾದಾಗಲೇ ಎದುರಿಗಿರುವವರು ನಮಗೆ ಅರ್ಥವಾಗುವುದು. ನಮ್ಮ ಮೂಗಿನ ನೇರದ ಆಚೆಗೂ ಸತ್ಯಕ್ಕೆ ಇನ್ನೊಂದು ಮಗ್ಗುಲಿರಬಹುದು ಎಂಬ ಅರಿವು ಉಂಟಾಗುವುದು. ಇಡೀ ಸಮಾಜವೇ, ಎಲ್ಲರೂ ಒಟ್ಟೊಟ್ಟಿಗೇ ಚೀರಾಡುವ ಟೀವಿ ಪ್ಯಾನಲ್ ಡಿಸ್ಕಶನ್ ಆಗಿಬಿಟ್ಟಿರುವ ಹೊತ್ತಿನಲ್ಲಿ ಕೇಳಿಸಿಕೊಳ್ಳುವುದರ ಅಗತ್ಯವನ್ನು ನಾವು ಮನಗಾಣಲೇಬೇಕಿದೆ. ಆಗಲೇ ನಮ್ಮೊಳಗೂ ನಾವು ಇಣುಕಿ ನೋಡಲು ಸಾಧ್ಯವಾಗುತ್ತದೆ.

ಮಾತಿನ ಚೂರಿ ಝಳಪಿಸುವ ಭರದಲ್ಲಿ ಮನುಷ್ಯತ್ವದ ಸೆಲೆಯನ್ನೇ ಮುಚ್ಚಿಕೊಂಡಿರುವ ಸಮಾಜವನ್ನು ಮಾನವೀಯತೆಯ ಒರತೆ ತೊಳೆಯಲಿ. ಒಡೆಯುವುದನ್ನೇ ಕೆಲಸ ಮಾಡಿಕೊಂಡವರ ಮನಸ್ಸುಗಳು ಕೂಡಿಸುವುದರ ಖುಷಿಯನ್ನು ಮನಗಾಣಲಿ. 2022 ಎಲ್ಲ ನೋವಿನ ಧ್ವನಿಗಳಿಗೂ ಸಾಂತ್ವನದ ತಂಪನ್ನೆರೆಯಲಿ.

**-ಬಾದಲ್ ನಂಜುಂಡಸ್ವಾಮಿ,** ಕಲಾವಿದ, ಮೈಸೂರು

2022 ಹೇಗಿರಬೇಕು?

## ನೃತ್ಯಕ್ಷೇತ್ರದಲ್ಲಿ ಜೀವಕಳೆ ತುಂಬಲಿ



ಕಳೆದೆರಡು ವರ್ಷಗಳಿಂದ ಕೊರೊನಾ ಮಹಾಮಾರಿ ಇಡೀ ವಿಶ್ವವನ್ನೇ ನಡುಗಿಸಿದೆ. ಎಲ್ಲ ಕ್ಷೇತ್ರದಲ್ಲಿಯೂ ಭಯವೇ ಆವರಿಸಿತ್ತು. ಆದರೆ ಈ ಹೊಸ ವರ್ಷ 2022 ಹಾಗಾಗದಿರಲಿ. ಎಲ್ಲೆಲ್ಲೂ ಹೊಸತನದ ಭಾಷ್ಯ ಬರೆಯಲಿ. ಸಂಗೀತ, ನೃತ್ಯದ ಮೂಲಕ ಜನರ ಮನ ಮತ್ತೆ ಆಹ್ಲಾದದಿಂದ ಅರಳಲಿ ಎಂಬ ಆಸೆ, ಆಕಾಂಕ್ಷೆ ನನ್ನದು.

ಕೊರೊನಾ ಬಂದಾಗಿನಿಂದ ಭರತನಾಟ್ಯ ಕಾರ್ಯಕ್ರಮಗಳು ನಡೆಯದೆ ಒಂದು ರೀತಿಯ ಶೂನ್ಯ ಭಾವ ಆವರಿಸಿತ್ತು. ನೃತ್ಯ ಕಲಾವಿದರಿಗೆ ಅವಕಾಶ ಸಿಗದೆ ಕಲೆ ಕಮರಿಹೋಗುವ ಭೀತಿ ಉಂಟಾಗಿತ್ತು. ಆದರೆ ಈ ನೂತನ ವರ್ಷದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ಸಿಕ್ಕಿ ಸಂಗೀತ, ನೃತ್ಯ ಕ್ಷೇತ್ರದಲ್ಲಿ ಮತ್ತೆ ಜೀವಕಳೆ ತುಂಬಲಿ.

ಕಲಾವಿದನ ಕಲೆಯ ದಾಹ ಎಂದೂ ತಣಿಯುವುದಿಲ್ಲ. ತನ್ನ ಕ್ಷೇತ್ರದಲ್ಲಿ ಬೆಳೆಯಬೇಕು ಎನ್ನುವ ಆಸೆ ಇದ್ದೇ ಇರುತ್ತದೆ. ಹೊಸ ಕೊರಿಯೊಗ್ರಫಿ, ಹೊಸ ತರದ ನೃತ್ಯ, ವಿಭಿನ್ನ ಅಭಿನಯದ ಮೂಲಕ ಜನಮಾನಸದಲ್ಲಿ ಮತ್ತೆ ಅದೇ ಸಂತೋಷ, ನೆಮ್ಮದಿ ನೆಲೆಸಲಿ. ಮತ್ತೆ ಪುಷ್ಪಾಂಜಲಿ, ಜತಿ, ತಿಲ್ಲಾನಗಳನ್ನೊಳಗೊಂಡ ಭರತನಾಟ್ಯದ ಸೊಬಗನ್ನು ಕಲಾರಸಿಕರು ಸವಿಯುವಂತಾಗಲಿ.

**-ಶ್ರೀಪದ್ಮ,** ಭರತನಾಟ್ಯ ಕಲಾವಿದೆ, ಕಲಬುರಗಿ

ನಿರೀಕ್ಷಿಸುವುದು ಅಧಿಕಪ್ರಸಂಗ ಅಲ್ಲವೆಂದು ಭಾವಿಸುವೆ. ಈಗಷ್ಟೇ ಕಣ್ಣು ಅರಳಿಸುತ್ತಿರುವ ನನ್ನನ್ನು ಮಗುವೆಂದೇ ಭಾವಿಸಿ, 2022 ಹೆಸರಿನ ಈ ಕಂದಮ್ಮನಿಗೆ ಒಂದಷ್ಟು ಪ್ರಾಮಿಸ್ ಮಾಡುವಿರಾ? ಅನುಮಾನ ಬೇಡ, ನಾನು ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವುದಿಲ್ಲ. ನಿಮ್ಮಿಂದ ಅಸಾಧ್ಯವಾದುದನ್ನು, ನಿಮಗೆ ತೊಂದರೆ ಆಗುವಂತಹದ್ದನ್ನು ಬಯಸುವುದಿರಲಿ, ಕಲ್ಪಿಸಿಕೊಳ್ಳಲೂ ನಾನು ಬಯಸುವುದಿಲ್ಲ.

ಹಾಂ, ನಾವು ಮಾಡಬೇಕಾದ ಪ್ರಾಮಿಸ್‌ಗಳೇನು ಎಂದು ಹುಬ್ಬೇರಿಸಿದಿರಾ? ನಾನು ಬಲ್ಲೆ, ಮಕ್ಕಳ ಮಾತಿಗೆ ಯಾರು ಇಲ್ಲವೆನ್ನುವರು. ಎಲ್ಲ ಅಪ್ಪ ಅಮ್ಮಂದಿರು ಕನಿಷ್ಠ ತಮ್ಮ ಮಕ್ಕಳ ಬಗ್ಗೆಯಾದರೂ ಕರುಣೆಯುಳ್ಳವರಾಗಿರುತ್ತಾರೆ. ಆ ನಂಬಿಕೆಯೇ ನಾಳೆಗಳ ಬಗ್ಗೆ ಇನ್ನೂ ನಂಬಿಕೆ ಉಳಿಸಿಕೊಳ್ಳಲು ಕಾರಣವಾಗಿದೆ.

ಇರಲಿ, ಈಗ ಪ್ರಾಮಿಸ್‌ಗಳ ಬಗ್ಗೆ ಮಾತನಾಡೋಣ. ನೀವು ಮಾಡಬೇಕಾದ ಮೊದಲ ಪ್ರಾಮಿಸ್: ಓದುವ ಹವ್ಯಾಸ ರೂಢಿಸಿಕೊಳ್ಳುವುದು. ಹಾಂ, ಆ ಓದಿಗೂ ಒಂದು ಚೌಕಟ್ಟಿದೆ. ನೀವು ಗಾಂಧಿ ಮತ್ತು ಅಂಬೇಡ್ಕರ್ ಮಹಾಶಯರ ಜೀವನ ವೃತ್ತಾಂತಗಳನ್ನು ಓದಬೇಕೆನ್ನುವುದು ನನ್ನ ಆಸೆ. ಹೀಗೆ ಓದಿದರೆ ಏನಾಗುತ್ತದೆ ಎಂದಿರಾ? ಓದುತ್ತಾ ಹೋದಂತೆ ಉತ್ತರ ನಿಮಗೇ ಹೊಳೆಯುತ್ತಾ ಹೋಗುತ್ತದೆ.



ಎರಡನೇ ಪ್ರಾಮಿಸ್, ಅಂಗಳದಲ್ಲಿ ಹಸಿರಿನ ಚಿತ್ತಾರ ಬಿಡಿಸುವುದು. ವಿಷಯ ಸರಳವಾದುದು. ಮನೆಯ ಹಿತ್ತಿಲೋ ಅಂಗಳವೋ ರಸ್ತೆ ಬದಿಯೋ ಹೊಲವೋ – ಎಲ್ಲಿ ಸಾಧ್ಯವೋ ಅಲ್ಲಿ ಒಂದೋ ಎರಡೋ ನಿಮಗೆಷ್ಟು ಸಾಧ್ಯವೋ ಅಷ್ಟು ಗಿಡ ನೆಡಿ. ಆ ಗಿಡಕ್ಕೆ ನಿಮ್ಮ ಕುಟುಂಬದ ಹಿರೀಕರ ಹೆಸರಿಡಿ. ಮಕ್ಕಳ ಹೆಸರಿಡಿ.

ನನಗೆ ಅತಿಯಾಸೆಯಿಲ್ಲ, ಇನ್ನೊಂದೇ ಒಂದು ಪ್ರಾಮಿಸ್, ಮೂರಕ್ಕೆ ಮುಕ್ತಾಯ. ಕನಿಷ್ಠ ವಾರಕ್ಕೊಮ್ಮೆಯಾದರೂ ಇರುಳಿನಲ್ಲಿ ಮನೆಯ ನೆತ್ತಿಯ ಮೇಲೆ ಒಂದಿಷ್ಟು ಸಮಯ ಕಳೆಯಿರಿ. ಮನೆಮಂದಿಯನ್ನೆಲ್ಲ ಸೇರಿಸಿಕೊಂಡು ಹರಟೆ ಕೊಚ್ಚಿ. ಚೆಲ್ಲಾಪಿಲ್ಲಿಯಾಗಿರುವ ಚುಕ್ಕಿಗಳ ನೋಡುತ್ತ, ಅವುಗಳ ಮಿಣುಕುಕಂಗಳ್ಲಿ ನಿಮ್ಮ ಇಷ್ಟಪಾತ್ರರ ಬಿಂಬವೇನಾದರೂ ಕಾಣುತ್ತದಾ ನೋಡಿ. ಹಾಂ, ಆಕಾಶ ನೋಡುವ ಈ ಆಟದಲ್ಲಿ ನಿಮ್ಮ ಕಣ್ಣಿಗೆ ನಾನು ಬಿದ್ದರೂ ಬೀಳಬಹುದು. ಹಾಗೆ ಕಾಣಿಸಿದರೆ ಮಂದಹಾಸ ತುಳುಕಿಸುತ್ತ, ಹಾಯ್ ಎನ್ನಿ. ನಿಮ್ಮ ಸಂತೋಷ ಕಂಡಾಗ ನನ್ನ ಕಣ್ಣುಗಳು ಮಿನುಗದಿರುವುದು ಸಾಧ್ಯವೇ?

ಬಂಧುವೇ, ನನ್ನೀ ಮೂರು ಕೋರಿಕೆಗಳನ್ನು ಈಡೇರಿಸುವೆಯಾ? ಅಸ್ತು ಎನ್ನಿ. ಮಕ್ಕಳು ಸುಳ್ಳು ಹೇಳುವುದಿಲ್ಲ: ನನ್ನ ಕೋರಿಕೆಗಳನ್ನು ಈಡೇರಿಸಿದರೆ, ನಿಮ್ಮ ಬದುಕನ್ನು ಬೆಳದಿಂಗಳಿಗೆ ಒಡ್ಡಿಕೊಳ್ಳುವುದೆಂದೇ ಅರ್ಥ.

ಹಾಂ, ನನ್ನ ಎಳೆಯ ಕೈಗಳು ಬರೆದು ದಣಿಯುತ್ತಿವೆ. ಕುಶಲೋಪರಿಯಿನ್ನು ಸಾಕು. ಹೊಸ ವರ್ಷದ ಸಹಪಯಣಕ್ಕೆ ನಿಮ್ಮನ್ನು ಸ್ವಾಗತಿಸುವೆ. ಎಲ್ಲವೂ ಶುಭವಾಗಲಿ. ನನಗೂ ಶುಭ ಹಾರೈಸಿ.

ಇಂತೀ ನಮಸ್ಕಾರಗಳು

**2022**

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in